# ಕರ್ನಾಟಕ ವಿಧಾನ ಪರಿಷತ್ತು

ವಿಶ್ವದಾದ್ಯಂತ ಬಹು ವೇಗವಾಗಿ ಹರಡುತ್ತಿರುವ ಕೋವಿಡ್-19 ಸಾಂಕ್ರಾಮಿಕ ರೋಗವನ್ನು ನಮ್ಮ ರಾಜ್ಯದಲ್ಲಿಯೂ ಅಷ್ಟೇ ಸಮರ್ಥವಾಗಿ ನಿಯಂತ್ರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಸ್ವಾವಲಂಬಿಯಾಗಿ ತನ್ನ ವಿವಿಧ ಹಂತದ ಆರೋಗ್ಯ ಕೇಂದ್ರಗಳನ್ನು ಸಜ್ಜುಗೊಳಿಸುವಲ್ಲಿ ಹಾಗೂ ಅವಶ್ಯ ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದರಲ್ಲಿ ವಿಫಲವಾಗಿದೆ. ಈ ವಿಚಾರವಾಗಿ ಸದನದ ಸದಸ್ಯರಾದ ನಮಗಾಗಲೀ ಮತ್ತು ಜನ ಸಾಮಾನ್ಯರಿಗಾಗಲೀ ಕೋವಿಡ್-19 ರೋಗ ನಿಯಂತ್ರಣಕ್ಕಾಗಲಿ ಸರ್ಕಾರವು ಮಾಡಿಕೊಂಡಿರುವ ಸಿದ್ಧತೆಗಳ ಬಗ್ಗೆ ಯಾವುದೇ ನಿಖರವಾದ ಅಂಕಿ-ಅಂಶಗಳು ಸಿಗದೆ ಜನ ಸಾಮಾನ್ಯರು ಆತಂಕಕ್ಕೆ ಒಳಗಾಗಿ ಸಾವು-ನೋವುಗಳ ಸಂಖ್ಯೆ ಸಹ ಹೆಚ್ಚಾಗುತ್ತಿರುವುದನ್ನು ನಾವೆಲ್ಲಾ ಗಮನಿಸುತ್ತಿದ್ದೇವೆ.

ಈ ನಿಟ್ಟಿನಲ್ಲಿ ಸರ್ಕಾರದಿಂದ ಜಿಲ್ಲಾ, ತಾಲ್ಲೂಕು ಮತ್ತು ರಾಜ್ಯ ಮಟ್ಟದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಮಾರ್ಚ್-2020ರ ನಂತರ ಕಲ್ಪಿಸಿರುವ ಮೂಲಭೂತ ಸೌಕರ್ಯಗಳು, ಅದಕ್ಕಾಗಿ ವೆಚ್ಚ ಮಾಡಲಾದ ಅನುದಾನ, ಖಾಸಗಿ ಮತ್ತು ಸರ್ಕಾರಿ ಪ್ರಯೋಗಾಲಯಗಳಲ್ಲಿ ಇದುವರೆವಿಗೂ ನಡೆಸಿರುವ ಕೋವಿಡ್-19 ಪರೀಕ್ಷೆಗಳ ವಿವರ, ಕೋವಿಡ್ ರೋಗಿಗಳ ಆರೈಕೆಗಾಗಿ ರಾಜ್ಯಾದ್ಯಂತ ತೆರೆದಿರುವ ಕೋವಿಡ್ ಆರೈಕೆ ಕೇಂದ್ರಗಳ ಸಂಖ್ಯೆ ಅದರಲ್ಲಿ ಆರೈಕೆ ಪಡೆದ ರೋಗಿಗಳ ವಿವರ ಮತ್ತು ಅದಕ್ಕಾಗಿ ಮಾಡಲಾದ ವೆಚ್ಚದ ಸಂಪೂರ್ಣ ವಿವರಗಳೊಂದಿಗೆ ಮುಂದಿನ ದಿನಗಳಲ್ಲಿ ಅಂದಾಜಿಸಲಾಗಿರುವ ಕೋವಿಡ್ ರೋಗಿಗಳ ಸಂಖ್ಯೆಗೆ ಅನುಗುಣವಾಗಿ ಜನ ಸಾಮಾನ್ಯರಿಗೆ ಚಿಕಿತ್ಸೆ ಕೊಡಿಸಲು ಮಾಡಿಕೊಂಡಿರುವ ಸಿದ್ಧತೆಗಳ ವಿವರವಾದ ಮಾಹಿತಿಯನ್ನು ಸದನದ ಮೂಲಕ ಸಾರ್ವಜನಿಕರಿಗೆ ನೀಡಿ ಅವರ ಮನೋಬಲ ಹೆಚ್ಚಿಸುವಂತಹ ಕೆಲಸ ಮಾಡುವ ಬಗ್ಗೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ ರವರು ನಿಯಮ -72 ರಡಿ ಗಮನ ಸೆಳೆಯುವ ಸೂಚನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಹೇಳಿಕೆ:

ರಾಜ್ಯದಲ್ಲಿ ದಿನಾಂಕ: 25.9.2020 ರವರೆಗೆ ಒಟ್ಟು 5,48,557 ಕೋವಿಡ್-19 ಸೋಂಕು ಖಚಿತಪಟ್ಟ ಪ್ರಕರಣಗಳು, ಇವುಗಳಲ್ಲಿ 8331 ಜನ ಮರಣ ಹೊಂದಿದ್ದು, 4,44,658 ಜನ ಗುಣಮುಖರಾಗಿ ಆಸ್ಪತ್ರೆಯಿಂದ ಬಿಡುಗಡೆ ಹೊಂದಿರುತ್ತಾರೆ.

ರಾಜ್ಯದಲ್ಲಿ ಒಟ್ಟು 137 ಸರ್ಕಾರಿ ಮತ್ತು ಖಾಸಗಿ ಪ್ರಯೋಗಾಲಯಗಳಿರುತ್ತವೆ. ಸದರಿ ಪ್ರಯೋಗಾಲಯಗಳಲ್ಲಿ ಪರೀಕ್ಷೆ ಮಾಡಿರುವ ವಿವರ ಈ ಕೆಳಕಂಡಂತಿದೆ:

| ದಿನಾಂಕ(25.09.2020) | ಆರ್‌ಎಟಿ | ಆರ್‌ಟಿಪಿಸಿಆರ್ | ಒಟ್ಟು ಟೆಸ್ಟ್ |
|---|---|---|---|
| ಇಂದು | 20284 | 39635 | 59919 |
| ಒಟ್ಟು ಇಲ್ಲಿಯವರೆಗೆ | 1583296 | 2935627 | 4518923 |

ರಾಜ್ಯದಲ್ಲಿ ಕೋವಿಡ್-19 ಚಿಕಿತ್ಸೆಗೆ 62 ಡಿಸಿಹೆಚ್(12927 ಹಾಸಿಗೆಗಳು), 867 ಡಿಸಿಎಸ್‌ಸಿ(50650 ಹಾಸಿಗೆಗಳು), 2422 ಕೋವಿಡ್ ಕೇರ್ ಕೇಂದ್ರಗಳನ್ನು (81,201 ಹಾಸಿಗೆಗಳು) ಸ್ಥಾಪಿಸಲಾಗಿದೆ. ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಒಟ್ಟು 1,44,772 ಹಾಸಿಗೆಗಳು ಇರುತ್ತದೆ. ಖಾಸಗಿ ಆಸ್ಪತ್ರೆಗಳಲ್ಲಿ 50% ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗಾಗಿ ಮೀಸಲಿಡಲು ಆದೇಶಿಸಲಾಗಿದೆ. ಅಕ್ಟೋಬರ್ 2020ರ ಮಧ್ಯದವರೆಗೆ ಸುಮಾರು 7 ಲಕ್ಷ ಕೋವಿಡ್ ಪ್ರಕರಣಗಳು ಬರುವ ಸಾಧ್ಯತೆ ಇದೆಯೆಂದು ಅಂದಾಜಿಸಲಾಗಿದೆ. ಆದಕಾರಣ ಜಿಲ್ಲಾ ಮಟ್ಟದಲ್ಲಿ 125 ಆಕ್ಸಿಜನ್ ಬೆಡ್ ಮತ್ತು ತಾಲ್ಲೂಕು ಮಟ್ಟದಲ್ಲಿ 50 ಆಕ್ಸಿಜನ್ ಬೆಡ್‌ಗಳನ್ನು ಸಿದ್ಧತೆ ಮಾಡಿಕೊಳ್ಳಲಾಗಿದೆ. ಅವಶ್ಯಕತೆ ಇರುವ ಕಡೆ ವೆಂಟಿಲೇಟರ್ ಸೌಲಭ್ಯಗಳನ್ನು ಸಹ ಕಲ್ಪಿಸಲಾಗಿದೆ.

ಕೇಂದ್ರ ಸರ್ಕಾರದಿಂದ ಎನ್ ಹೆಚ್ ಎಂ ಅಡಿಯಲ್ಲಿ ರೂ241.52 ಕೋಟಿಗಳು ಹಾಗೂ ರಾಜ್ಯ ಸರ್ಕಾರದಿಂದ ಎನ್ ಹೆಚ್ ಎಂ ಅಡಿಯಲ್ಲಿ ರೂ 39.58 ಕೋಟಿಗಳು,ಒಟ್ಟು ರೂ 281.10 ಕೋಟಿ ಗಳು ಬಿಡುಗಡೆಯಾಗಿದ್ದು,ಅದರಲ್ಲಿ ರೂ240.39 ಕೋಟಿ ಗಳನ್ನು ವ್ಯಯಿಸಲಾಗಿದೆ.

ವಿಪತ್ತು ಪರಿಹಾರ ನಿಧಿಯಿಂದ ರೂ 70 ಕೋಟಿಗಳು ಬಿಡುಗಡೆಯಾಗಿದ್ದು, ರೂ 66.43 ಕೋಟಿ ಗಳನ್ನು ಖರ್ಚು ಮಾಡಲಾಗಿದೆ.

ಕೆ.ಡಿ.ಎಲ್.ಡಬ್ಲ್ಯೂ.ಎಸ್. ಬಳಿ ಇರುವ ಸ್ವಂತ ನಿಧಿಯಿಂದ ಭರಿಸಲು ಸರ್ಕಾರವು ಆದೇಶಿಸಿದ್ದು ತುರ್ತು ಪರಿಸ್ಥಿತಿ ಇರುವುದರಿಂದ ನಂತರ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ್ದು, ಈಗಾಗಲೇ ಈ ಸಂಸ್ಥೆ ರೂ294.75 ಕೋಟಿಗಳನ್ನು ವೆಚ್ಚ ಮಾಡಿರುತ್ತದೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಯಲ್ಲಿ ಲಭ್ಯವಿದ್ದ ರೂ 31.62 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಆರೋಗ್ಯ ಇಲಾಖೆ ಇಂಜಿನಿಯರಿಂಗ್ ವಿಭಾಗಕ್ಕೆ ಮುಖ್ಯಮಂತ್ರಿಗಳ ಪರಿಹಾರ ನಿಧಿ (ಎನ್.ಹೆಚ್.ಎಂ ಮುಖಾಂತರ) ಮೆಡಿಕಲ್ ಗ್ಯಾಸ್ ಪೈಪ್‌ಲೈನ್ ಸಿಸ್ಟಮ್ ಅಳವಡಿಕೆಗಾಗಿ ರೂ 109.10 ಕೋಟಿಗಳು ಬಿಡುಗಡೆಯಾಗಿದ್ದು, ರೂ 58.20 ಕೋಟಿ ರೂಗಳನ್ನು ವೆಚ್ಚ ಮಾಡಲಾಗಿದೆ.

ಕೋವಿಡ್-19ರ ನಿರ್ವಹಣೆಗಾಗಿ ಜಿಲ್ಲಾ ಮಟ್ಟದ 18 ಆಸ್ಪತ್ರೆಗಳಲ್ಲಿ ಗುತ್ತಿಗೆ/ ಹೊರಗುತ್ತಿಗೆ ಅಡಿಯಲ್ಲಿ ವೈದ್ಯರು -10 / ಶುಶ್ರೂಷಕರು- 20, ಪ್ರ.ಶಾ.ತಂತ್ರಜ್ಞ-5, ಗ್ರೂಪ್-ಡಿ 10, ಒಟ್ಟಾರೆಯಾಗಿ 45 ರಂತೆ ಒಟ್ಟಾರೆ 810 ಹುದ್ದೆಗಳನ್ನು ನೇಮಕ ಮಾಡಿಕೊಂಡಿರುವುದಕ್ಕೆ ವೇತನದ ಅನುದಾನ ರೂ 12.90 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ 4.17 ಕೋಟಿ ಖರ್ಚಾಗಿರುತ್ತದೆ. ಬಿಡುಗಡೆಯಾದ ಅನುದಾನದ ವಿವರಗಳು, ಸಂಸ್ಥೆಯ ಹೆಸರು ಹಾಗೂ ವೆಚ್ಚದ ಸಂಪೂರ್ಣ ವಿವರಗಳನ್ನು ಅನುಬಂಧ । ರಲ್ಲಿ ಲಗತ್ತಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆವತಿಯಿಂದ ಕೋವಿಡ್-19 ನಿಯಂತ್ರಣಕ್ಕಾಗಿ ಈ ಕೆಳಕಂಡ ಸಿದ್ಧತೆಗಳನ್ನು ಕೈಗೊಳ್ಳಲಾಗಿರುತ್ತದೆ:-

ಕೋವಿಡ್ ರೋಗ ನಿಯಂತ್ರಣ ಮತ್ತು ಚಿಕಿತ್ಸೆಗೆ ಟೆಕ್ನಿಕಲ್ ಅಡ್ವೈಸರಿ ಸಮಿತಿ ರಚಿಸಿದ್ದು, ಈ ಸಮಿತಿ ಕಾಲಕಾಲಕ್ಕೆ ನೀಡುವ ಮಾರ್ಗಸೂಚಿಗಳನ್ನು ಪಾಲಿಸಲಾಗುತ್ತಿದೆ ಹಾಗೂ ಈ ಮಾಹಿತಿಯನ್ನು ಸಾರ್ವಜನಿಕರಿಗೂ ಕೂಡ ನೀಡಲಾಗುತ್ತಿದೆ.

ಕೋವಿಡ್ ಪಾಸಿಟಿವ್ ರೋಗಿಗಳ ಕಾಂಟ್ಯಾಂಕ್ಟ್‌ಗಳನ್ನು ಟ್ರೇಸ್ ಮಾಡಿ, ಟೆಸ್ಟ್ ಮಾಡಿ ಪಾಸಿಟಿವ್ ಬಂದಿದಲ್ಲಿ ಚಿಕಿತ್ಸೆ ಕೊಡಲು ಕ್ರಮ ಕೈಗೊಳ್ಳಲಾಗಿದೆ.

ಕೋವಿಡ್ ಕೇರ್ ಸೆಂಟರ್ ಗಳು ಡಿ.ಸಿ.ಹೆಚ್.ಸಿ, ಡಿ.ಸಿ.ಹೆಚ್.ಗಳಿಗಾಗಿ ಎಲ್ಲಾ ಜಿಲ್ಲೆಗಳ ಸರ್ಕಾರಿ ಆಸ್ಪತ್ರೆಗಳನ್ನು ಗುರುತಿಸಲಾಗಿದೆ ಹಾಗೂ ಸದರಿ ವ್ಯವಸ್ಥೆಗೆ ಅವಶ್ಯಕ ಮಾನವ ಸಂಪನ್ಮೂಲ ಹಾಗೂ ಸಲಕರಣೆಗಳ (ಆಕ್ಸಿಜನ್, ವೆಂಟಿಲೇಟರ್, ಔಷಧ) ವ್ಯವಸ್ಥೆ ಮಾಡಲಾಗಿದೆ.

ಇದಲ್ಲದೆ ಖಾಸಗಿ ಆಸ್ಪತ್ರೆಗಳಲ್ಲೂ ಸಹ ಕೋವಿಡ್ ಚಿಕಿತ್ಸೆಗಾಗಿ ಹಾಸಿಗೆಗಳನ್ನು ನಿಗಧಿಪಡಿಸಲಾಗಿದೆ. ಹಾಗೂ ಸರ್ಕಾರಿ ಕೋಟದಡಿ ಉಚಿತ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡಲಾಗಿದೆ. ಕೋವಿಡ್ ಪರೀಕ್ಷೆಗಾಗಿ ಸರ್ಕಾರಿ ಹಾಗೂ ಖಾಸಗಿ ಪ್ರಯೋಗಾಲಯಗಳ ಸಂಖ್ಯೆಯನ್ನು ಹೆಚ್ಚಿಸಿ, ತುರ್ತುವರದಿ ಪಡೆಯಲು ಕ್ರಮ ವಹಿಸಲಾಗಿದೆ.

ಪಾಸಿಟಿವ್ ಎಂದು ಫಲಿತಾಂಶ ಬಂದ ಕೋವಿಡ್-19 ಸೋಂಕಿತರಿಗೆ ಮತ್ತು ಕ್ವಾರಂಟೈನ್ ನಲ್ಲಿರುವ ಸೋಂಕಿತ ವ್ಯಕ್ತಿಗಳಿಗೆ ಮಾನಸಿಕ ಆರೋಗ್ಯ ಸೇವೆ ಮತ್ತು ಚಿಕಿತ್ಸೆ ನೀಡುವ ಅವಕಾಶವನ್ನು ಕಲ್ಪಿಸಲಾಗಿದೆ. ಸಾರ್ವಜನಿಕ ಆರೋಗ್ಯ ಸಂಸ್ಥೆಗಳು, ರಾಜ್ಯ ಮತ್ತು ಜಿಲ್ಲಾ ಮಾನಸಿಕ ಆರೋಗ್ಯ ತಂಡವನ್ನು ಸಂಪರ್ಕಿಸುವಂತೆ ಮತ್ತು ಸಹಾಯವಾಣಿ (104 ಸೇವೆ) ಮೂಲಕ ಸಹಾಯ ಪಡೆಯುವಂತೆ ಅವರನ್ನು ಪ್ರೋತ್ಸಾಹಿಸಲಾಗುತ್ತಿದೆ. ಗರಿಷ್ಠ ಜನರನ್ನು ತಲುಪಲು ಮತ್ತು ಸುರಕ್ಷತೆಗಾಗಿ ಟೆಲಿ-ಕೌನ್ಸೆಲಿಂಗ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ.

ರಾಜ್ಯ ಸರ್ಕಾರವು "ಜಾಗೃತಿ ಕರ್ನಾಟಕ" ಎಂಬ ಯೂಟ್ಯೂಬ್ ಚಾನಲ್ ಆರಂಭಿಸಿದೆ; ಕೋವಿಡ್-19 ಸರ್ವವ್ಯಾಪಿ ವ್ಯಾದಿಯ ಸಂದರ್ಭದಲ್ಲಿ ಮಾನಸಿಕ ಆರೋಗ್ಯ ಕಾಯ್ದುಕೊಳ್ಳಬೇಕು ಎನ್ನುವ ಬಗ್ಗೆ ಆರೋಗ್ಯ ವೃತ್ತಿಪರರು ಹಾಗೂ ಸಾರ್ವಜನಿಕರಿಗೆ ಈ ಮೂಲಕ ಮಾರ್ಗದರ್ಶನ ನೀಡಲಾಗುತ್ತಿದೆ. ಕೋವಿಡ್-19 ಪ್ಯಾಂಡಮಿಕ್ ಸಮಯದಲ್ಲಿ ನಿರಂತರವಾಗಿ ಮನೋಸ್ಥೈರ್ಯ ತುಂಬಲು ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮಾನಸಿಕ ಆರೋಗ್ಯ ವಿಭಾಗದ ಮುಖಾಂತರ ಕೈಗೊಳ್ಳಲಾಗುತ್ತಿದೆ.

**ಆಕುಕ 127 ಎಸ್‌ಎಂಎಂ 2020**

(ಬಿ.ಶ್ರೀರಾಮುಲು)

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**

**ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**

| ಕ್ರ ಸಂ | ಸಂಸ್ಥೆಯ ಹೆಸರು | | ಬಿಡುಗಡೆಯಾದ ಅನುದಾನ | ವೆಚ್ಚದ ವಿವರ |
|---|---|---|---|---|
| 1 | ಎನ್.ಹೆಚ್.ಎಂ | ಕೇಂದ್ರ | 241.52 | 240.39 |
| | | ರಾಜ್ಯ | 039.58 | |
| | | ಒಟ್ಟು | 281.10 | |
| 2 | ರಾಜ್ಯ ವಿಪತ್ತು ಪರಿಹಾರ ನಿಧಿ | | 20.00 | 16.43 |
| 3 | ಅ) ಕೆ.ಡಿ.ಎಲ್.&. ಡಬ್ಲೂ.ಎಸ್:–<br>• ಮೇಲಿನ ಕ್ರಸಂ. 1ರ ಎನ್.ಹೆಚ್.ಎಂ ಒಟ್ಟು **240.39** ಕೋಟಿಯ ವೆಚ್ಚದಲ್ಲಿ ಕೆ.ಡಿ.ಎಲ್.ಡಬ್ಲ್ಯೂ.ಎಸ್. ರವರು ಕೇಂದ್ರದ **103.27** ಕೋಟಿ ಹಾಗೂ ರಾಜ್ಯದ **45.00** ಕೋಟಿಗಳಂತೆ ಒಟ್ಟಾರೆಯಾಗಿ **148.27** ಕೋಟಿ ವೆಚ್ಚ ಮಾಡಿರುತ್ತಾರೆ.<br>• ಕೆ.ಡಿ.ಎಲ್.ಡಬ್ಲ್ಯೂ.ಎಸ್. ಬಳಿ ಇರುವ ಸ್ವಂತ ನಿಧಿಯಿಂದ ಭರಿಸಲು ಸರ್ಕಾರವು ಆದೇಶಿಸಿದ್ದು ತುರ್ತು ಪರಿಸ್ಥಿತಿ ಇರುವುದರಿಂದ ನಂತರ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ್ದು, ಈಗಾಗಲ್ಲೇ ಈ ಸಂಸ್ಥೆ ವೆಚ್ಚ ಮಾಡಿರುವ ಮೊತ್ತ<br>• ಇಲ್ಲಿಯವರೆಗೂಕೆ.ಡಿ.ಎಲ್.ಡಬ್ಲ್ಯೂ.ಎಸ್.ರವರು ವೆಚ್ಚ ಮಾಡಿದ ಒಟ್ಟಾರೆ ವಿವರ ಈ ಕೆಳಗಿನಂತಿದೆ.<br>**148.27+50.00+31.62+294.75 =524.64** | | | 294.75 |
| | ಆ)ರಾಜ್ಯ ವಿಪತ್ತು ಪರಿಹಾರ ನಿಧಿ | | 50.00 | 50.00 |
| | ಇ) ಮುಖ್ಯಮಂತ್ರಿಗಳ ಪರಿಹಾರ ನಿಧಿ | | 31.62 | 31.62 |
| 4 | ಆರೋಗ್ಯ ಇಲಾಖೆ ಇಂಜಿನಿಯರಿಂಗ್ ವಿಭಾಗಕ್ಕೆ ಮುಖ್ಯಮಂತ್ರಿಗಳ ಪರಿಹಾರ ನಿಧಿ (ಎನ್.ಹೆಚ್.ಎಂ ಮುಖಾಂತರ)<br>ಮೆಡಿಕಲ್ ಗ್ಯಾಸ್ ಪೈಪ್‌ಲೈನ್ ಸಿಸ್ಟಮ್ ಅಳವಡಿಕೆ. | | 109.10 | 58.20 |
| 5 | ಕೋವಿಡ್–19ರ ನಿರ್ವಹಣೆಗಾಗಿ ಜಿಲ್ಲಾ ಮಟ್ಟದ 18 ಆಸ್ಪತ್ರೆಗಳಲ್ಲಿ ಗುತ್ತಿಗೆ/ ಹೊರಗುತ್ತಿಗೆ ಅಡಿಯಲ್ಲಿ ವೈದ್ಯರು –10 / ಶುಶ್ರೂಷಕರು– 20, ಪ್ರಶಾ.ತಂತ್ರಜ್ಞ–5, ಗ್ರೂಪ್–ಡಿ 10. ಒಟ್ಟಾರೆಯಾಗಿ 45 ರಂತೆ ಒಟ್ಟಾರೆ 810 ಹುದ್ದೆಗಳನ್ನು ನೇಮಕ ಮಾಡಿಕೊಂಡಿರುವುದಕ್ಕೆ ವೇತನದ ಅನುದಾನ | | 12.90 | 04.17 |
| | | | **504.72** | **695.56** |
| | **ಟಿಪ್ಪಣಿ:– ಕೆ.ಡಿ.ಎಲ್.ಡಬ್ಲ್ಯೂ.ಎಸ್. ರವರು ಹೆಚ್ಚುವರಿಯಾಗಿ ತಮ್ಮ ಬಳಿ ಇರುವ ನಿಧಿಯಿಂದ ರೂ. 294.75 ವೆಚ್ಚ ಭರಿಸಿರುತ್ತಾರೆ.** | | | |

| Abstract-1 | | | | | |
|---|---|---|---|---|---|
| KDLWS Covid-19 Payment Details | | | | | |
| Sl No | Head | No.of Po | PO Value | Payment | Balance |
| 1 | Drug | 116 | 3,28,74,57,670 | 2,22,70,49,446 | 1,06,04,08,224 |
| 2 | Eqpt | 154 | 3,31,30,73,161 | 2,80,94,95,439 | 50,35,77,722 |
| | **Total** | **270** | **6,60,05,30,831** | **5,03,65,44,885** | **1,56,39,85,946** |
| 3 | Others Expns | | 20,98,80,520 | 20,98,80,520 | - |
| **Grand Total** | | **270** | **6,81,04,11,351** | **5,24,64,25,405** | **1,56,39,85,946** |

Scanned with CamScanner

| Details for Covid -19 Others Expns | | | | |
|---|---|---|---|---|
| Sl No | Particulars | Order No | Po Value | Payment |
| 1 | Medical Education Department | FD/116/Expenditure-5/2019 | 4,61,98,400 | 4,61,98,400 |
| 2 | Sarvahitha Ayurvedalaya Pvt Ltd.(Ayush Kit Mysore) | HFW/108/PIM/2020 KDL/CAO-FA/DRUG/216/2019-20 | 2,87,50,000 | 2,87,50,000 |
| Total | | | 7,49,48,400 | 7,49,48,400 |

Scanned with CamScanner